# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ/23/2019/ಎ.ಆರ್.ಇ-10

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 25/01/2022.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ,
ಅಪರ ನಿಬಂಧಕರು ವಿಚಾರಣೆಗಳು-10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

**ವಿಷಯ:** ಆಪಾದಿತ ಸರ್ಕಾರಿ ನೌಕರ **ಶ್ರೀಮತಿ ಶಾಂತಮ್ಮ** (ಪ್ರಸ್ತುತ ನಿವೃತ್ತ), ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ರವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಬಿಡಿ-3726/2017/ಉನಿವಿ-4 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 17/10/2018.
2. ಸರ್ಕಾರದ ಆದೇಶ ಸಂಖ್ಯೆ: ಸಕಇ 512 ಪಕಸೇ 2018, ಬೆಂಗಳೂರು, ದಿನಾಂಕ: 04/01/2019.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/23/2019, ಬೆಂಗಳೂರು ದಿನಾಂಕ: 23/01/2019.

* * * *

ಬೆಂಗಳೂರು ಉತ್ತರ ತಾಲ್ಲೂಕು, ಹೆಸರಘಟ್ಟ ಹೋಬಳಿ, ರಾಜಾನುಕುಂಟೆ ಅಂಚೆ, ಮಾದಪ್ಪನಹಳ್ಳಿ ನಿವಾಸಿಯಾದ ಶ್ರೀ **ಎಂ.ಪಿ. ನಾಗರಾಜ್** (ಇನ್ನು ಮುಂದೆ **"ದೂರುದಾರರು"** ಎಂದು ಕರೆಯಲ್ಪಡುತ್ತಾರೆ) ರವರು ತಮ್ಮ ದೂರಿನಲ್ಲಿ ಕೋಲಾರ ಜಿಲ್ಲೆ, ಶ್ರೀನಿವಾಸಪುರ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದ **ಶ್ರೀಮತಿ ಶಾಂತಮ್ಮ** (ಪ್ರಸ್ತುತ ನಿವೃತ್ತ) ಸಹಾಯಕ

ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ (ಇನ್ನು ಮುಂದೆ **ಆಪಾದಿತ ಸರ್ಕಾರಿ ನೌಕರ**) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ದೂರು ಸಲ್ಲಿಸಿ 2015-16ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನ 14-15 ವಿದ್ಯಾರ್ಥಿನಿ ನಿಲಯಗಳಿಗೆ ಅಂತರ್ಜಾಲ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ ಮತ್ತು ಯುಪಿಎಸ್ ಗಳನ್ನು ಅಳವಡಿಸುವ ಸಂಬಂಧ ಟೆಂಡರ್ ಕರೆಯದೆ, ಸುಳ್ಳು ಮತ್ತು ಬೋಗಸ್ ದರಪಟ್ಟಿಗಳನ್ನು ರೂ. 1,00,000/- ದೊಳಗೆ ಪಡೆದುಕೊಂಡು ಸುಮಾರು 15,00,000/- ರೂಪಾಯಿಗೆ ಮೇಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಿ, ಎದುರುದಾರರು ಸರ್ಕಾರಿ ಹಣವನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಆಪಾದಿಸಿರುತ್ತಾರೆ.

2. ಮೇಲ್ಕಂಡಂತೆ ನೀಡಲಾದ ದೂರಿನ ಅಂಶಗಳನ್ನು ಪರಿಗಣಿಸಿ, ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಸದರಿಯವರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ಎದುರುದಾರರ ವಿರುದ್ಧ ಮಾಡಿರುವ ಆಪಾದನೆಗಳು ಮೇಲ್ನೋಟಕ್ಕೆ ಸಾಬೀತಾಗಿದ್ದರಿಂದ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಆದೇಶ ದಿನಾಂಕ: 04/01/2019 ರಂದು, **ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಶಾಂತಮ್ಮ (ಪ್ರಸ್ತುತ ನಿವೃತ್ತ)**, ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ಇವರ ವಿರುದ್ಧದ ಆರೋಪಗಳಿಗೆ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ಸರ್ಕಾರಿ ಆದೇಶವನ್ನು ನೀಡಿರುವ ಮೇರೆಗೆ, ಮಾನ್ಯ ಉಪಲೋಕಾಯುಕ್ತರವರು ದಿನಾಂಕ: 23.01.2019 ರಂದು ಅಪರ ನಿಬಂಧಕರು, ವಿಚಾರಣೆಗಳು-10 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸಲು ಆದೇಶಿಸಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ ರವರ ವಿರುದ್ಧ ದೋಷಾರೋಪಣೆ (Article of Charge) ಅನ್ನು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ

ಆರೋಪವನ್ನು ಆ.ಸ.ನೌ ರವರಿಗೆ ದಿನಾಂಕ: 28/06/2019 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## *ಅನುಬಂಧ–1*

## *ದೋಷಾರೋಪಣೆ–1*

ಶ್ರೀಮತಿ. **ಶಾಂತಮ್ಮ,** (ಪ್ರಸ್ತುತ ನಿವೃತ್ತ), ಸಹಾಯಕ ನಿರ್ದೇಶಕರು (ಗ್ರೇಡ್–2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕ್, ಕೋಲಾರ ಜಿಲ್ಲೆ ಆದ ನೀವು ಈ ಕೆಳಕಂಡ ಕರ್ತವ್ಯ ಲೋಪ/ದುವರ್ತನೆ ಎಸಗಿರುತ್ತೀರಿ:–

" ಆಪಾದಿತ ಸರ್ಕಾರಿ ನೌಕರರಾದ ನೀವು, 2015–16ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನ 14–15 ವಿದ್ಯಾರ್ಥಿ/ ವಿದ್ಯಾರ್ಥಿನಿ ನಿಲಯಗಳಿಗೆ ಅಂತರ್ಜಾಲ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ ಮತ್ತು ಯುಪಿಎಸ್ ಗಳನ್ನು ಅಳವಡಿಸುವ ಸಂಬಂಧ ಟೆಂಡರ್ ಕರೆಯದೆ, ಸುಳ್ಳು ಮತ್ತು ಬೋಗಸ್ ದರಪಟ್ಟಿಗಳನ್ನು '1 ಲಕ್ಷದೊಳಗೆ ಪಡೆದುಕೊಂಡು ಸುಮಾರು '15 ಲಕ್ಷಕ್ಕೂ ಮೇಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಿ, ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುತ್ತೀರಿ ".

2. ಆದಕಾರಣ, ಆಪಾದಿತ ಸರ್ಕಾರಿ ನೌಕರರಾದ ನೀವು ಸರ್ಕಾರಿ ಸೇವಕರಾಗಿದ್ದು, ನಿಮ್ಮ ಕರ್ತವ್ಯಪಾಲನೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆಯನ್ನು ತೋರಿಸದೆ ಸ್ವಂತ ಲಾಭಕ್ಕಾಗಿ ಸಾರ್ವಜನಿಕ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದು, ಆಪಾದಿತ ಸರ್ಕಾರಿ ನೌಕರರಾದ ನೀವು ಕರ್ನಾಟಕ ಸರ್ಕಾರಿ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3(1)ನೇ ನಿಬಂಧನೆಯನ್ನು ಉಲ್ಲಂಘಿಸಿ ದುರ್ನಡತೆ ಎಸಗಿದ್ದೀರಿ.

## ಅನುಬಂಧ-2

## ದೋಷಾರೋಪಣೆಯ ವಿವರ

(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡಕ್ಟ್)

3. ಬೆಂಗಳೂರು ಉತ್ತರ ತಾಲ್ಲೂಕ್ ಹೆಸರಘಟ್ಟ ಹೋಬಳಿ ರಾಜಾನುಕುಂಟೆ ಅಂಚೆ ಮಾದಪ್ಪನಹಳ್ಳಿ ನಿವಾಸಿಯಾದ **ಶ್ರೀ.ಎಂ.ಪಿ.ನಾಗರಾಜ** ಬಿನ್ ಪಾಚಲಪ್ಪ ರವರು ತಮ್ಮ ದೂರಿನಲ್ಲಿ, ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕ್ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾಗಿದ್ದ ಶ್ರೀಮತಿ.ಶಾಂತಮ್ಮ [ಪ್ರಸ್ತುತ ನಿವೃತ್ತ] ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

4. **ದೂರಿನ ಸಂಕ್ಷಿಪ್ತ ವಿವರಣೆ:-** 2015-16ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನ 14-15 ವಿದ್ಯಾರ್ಥಿ/ ವಿದ್ಯಾರ್ಥಿನಿ ನಿಲಯಗಳಿಗೆ ಅಂತರ್ಜಾಲ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ ಮತ್ತು ಯುಪಿಎಸ್ ಗಳನ್ನು ಅಳವಡಿಸುವ ಸಂಬಂಧ ಟೆಂಡರ್ ಕರೆಯದೆ, ಸುಳ್ಳು ಮತ್ತು ಬೋಗಸ್ ದರಪಟ್ಟಿಗಳನ್ನು '1 ಲಕ್ಷದೊಳಗೆ ಪಡೆದುಕೊಂಡು ಸುಮಾರು '15 ಲಕ್ಷಕ್ಕೂ ಮೇಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಿ, ಎದುರುದಾರರು ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿಕೊಂಡಿದ್ದಾರೆಂದು ಹೇಳಿದ್ದಾರೆ.

5. ದೂರಿನ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ :- ದೂರಿನಲ್ಲಿನ ಅಂಶಗಳು ತಾವು ಹಿಂದೆ ಶ್ರೀನಿವಾಸಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಗೆ ಸಂಬಂಧಿಸಿದ್ದು, ದಿನಾಂಕ:03/01/14 ರಿಂದ ಶ್ರೀನಿವಾಸಪುರ ತಾಲ್ಲೂಕ್ ಸಮಾಜ ಕಲ್ಯಾಣಾಧಿಕಾರಿ ಆಗಿ ನಂತರ ಮುಂಬಡ್ತಿ ಹೊಂದಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದೆ. ಸದರಿ ಅವಧಿಯಲ್ಲಿ ರಾಜ್ಯದಲ್ಲಿನ ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿಗಳಲ್ಲಿನ ವಿದ್ಯಾರ್ಥಿಗಳ ಹಾಜರಾತಿಯನ್ನು ಬಯೋ ಮೆಟ್ರಿಕ್ ಮೂಲಕ ಪಡೆದು, ಇ-ಹಾಜರಾತಿಯಂತೆ ವಿದ್ಯಾರ್ಥಿಗಳ ಊಟದ ವೆಚ್ಚ ಭರಿಸಲು ದಿನಾಂಕ:05/08/15ರಂದು ಸರ್ಕಾರದ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿರುವುದರಿಂದ, ಬಯೋ ಮೆಟ್ರಿಕ್ ಹಾಜರಾತಿಯನ್ನು ಕಡ್ಡಾಯಗೊಳಿಸುವಂತೆ ಕ್ರಮವಹಿಸಲು ಸೂಚನೆ ನೀಡಿರುವುದಾಗಿ ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ದಿನಾಂಕ:10/08/15ರ ಏಕರೂಪದ ಪತ್ರವನ್ನು ಬರೆದು ಅವಶ್ಯ ಕ್ರಮವನ್ನು

ಕೂಡಲೇ ಕೈಗೊಳ್ಳುವಂತೆ ತಿಳಿಸಿದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನ ಪ್ರತಿಯೊಂದು ವಿದ್ಯಾರ್ಥಿನಿಲಯದಲ್ಲಿ ಗಣಕಯಂತ್ರ ಇತ್ಯಾದಿ ಉಪಕರಣಗಳು ಹಾಗೂ ಅಂತರ್ಜಾಲ ಮತ್ತಿತರೆ ಅಂಶಗಳ ಬಗ್ಗೆ ಮತ್ತು ಇತರೆ ಅಂಶಗಳ ಬಗ್ಗೆ ಪರಿಶೀಲಿಸಲು ಸೂಚಿಸಿದ್ದು, ಆ ಬಗ್ಗೆ ವೆಚ್ಚಗಳನ್ನು ಸಂಬಂಧಿಸಿದ ವಸತಿ ಶಾಲೆಗಳ \ ವಸತಿ ನಿಲಯಗಳ ನಿರ್ವಹಣೆ ಲೆಕ್ಕ ಶೀರ್ಷಿಕೆ ಅಡಿ ನಿಯಮಾನುಸಾರ ಭರಿಸಲು ಹೇಳಲಾಗಿದೆ. ಇದಾದ ನಂತರ, ಸಮಾಜ ಕಲ್ಯಾಣ ಇಲಾಖೆಯ ಆಯುಕ್ತರು ದಿನಾಂಕ:16/10/15ರ ಅತೀ ಜರೂರು ಏಕ ರೂಪದ ಪತ್ರ ಬರೆದಿದ್ದಾರೆ. ಶ್ರೀನಿವಾಸಪುರ ತಾಲ್ಲೂಕಿನ ಪ್ರತಿಯೊಂದು ವಿದ್ಯಾರ್ಥಿನಿಲಯಗಳಿಗೆ ಅವಶ್ಯವಿರುವ ಬಯೋ ಮೆಟ್ರಿಕ್ ಉಪಕರಣ ಹಾಗೂ ಇತರೆ ಉಪಕರಣಗಳನ್ನು ಅಧಿಕೃತ ಸರಬರಾಜುದಾರರಿಂದ ಸರಬರಾಜು ಮಾಡಿಕೊಳ್ಳಲು ದರಪಟ್ಟಿಗಳನ್ನು ದಿನಾಂಕ:20/11/15ರಂದು ಹೊರಡಿಸಲಾಗಿದೆ. ಅದರಂತೆ ಪ್ರತಿಯೊಂದು ವಿದ್ಯಾರ್ಥಿನಿಲಯಕ್ಕೆ ಮೂರರಂತೆ ಟೆಂಡರ್‌ದಾರರು ದರಪಟ್ಟಿಗಳನ್ನು ಸಲ್ಲಿಸಿದ್ದಾರೆ. ಅವುಗಳನ್ನು ಪರಿಶೀಲಿಸಿ ತುಲನಾತ್ಮಕ ದರಪಟ್ಟಿಯನ್ನು ಸಿದ್ದಪಡಿಸಿ, ಜಂಟಿ ನಿರ್ದೇಶಕರಿಗೆ ಸಲ್ಲಿಸಲಾಗಿದೆ. ಸದರಿ ದರಪಟ್ಟಿಗಳನ್ನು ಅವರು ಪರಿಶೀಲಿಸಿ, ಅನುಮೋದನೆಯನ್ನು ನೀಡಿದ್ದಾರೆ. ಅದರಂತೆ ಸರಬರಾಜುದಾರರಾದ ಖುಷಿ ಅಸೋಸಿಯೇಟ್ಸ್ ರವರಿಗೆ ಆದೇಶಗಳನ್ನು ದಿನಾಂಕ:30/11/15ರಂದು ನೀಡಲಾಗಿದೆ. ಸರಬರಾಜು ಆದೇಶಗಳಂತೆ ಸದರಿ ಸಂಸ್ಥೆಯವರು ಉಪಕರಣಗಳನ್ನು ಸರಬರಾಜು ಮಾಡಿದ್ದು, ಆಯಾಯ ವಿದ್ಯಾರ್ಥಿನಿಲಯಗಳ ದಾಸ್ತಾನು ವಹಿಗಳಲ್ಲಿ ದಾಸ್ತಾನಿಗೆ ಪಡೆದು, ಅವುಗಳನ್ನು ಪರಿಶೀಲಿಸಿ, ಉಪಯೋಗಿಸಲಾಗುತ್ತಿದೆ. ಸದರಿ ಉಪಕರಣಗಳ ಗುಣಮಟ್ಟವು ಉತ್ತಮವಾಗಿದ್ದು, ಯಾವುದೇ ರೀತಿಯ ಲೋಪದೋಷಗಳು ಕಂಡು ಬಂದಿಲ್ಲ. ಸರಬರಾಜು ಮಾಡಿದ ಬಿಲ್ಲುಗಳಿಗೆ ಸಂಬಂಧಿಸಿದಂತೆ ಡಿ.ಸಿ ಬಿಲ್‌ಗಳಿಗೆ ಅನುಮೋದನೆ ನೀಡಲು ಜಂಟಿ ನಿರ್ದೇಶಕರಿಗೆ ಕೋರಿ ಅನುಮೋದನೆಗೊಂಡಿರುವ ಬಿಲ್ಲುಗಳನ್ನು ಖಜಾನೆಗೆ ಸಲ್ಲಿಸಿ, ಸರಬರಾಜುದಾರರ ಹೆಸರಿಗೆ ಚೆಕ್ ಬರೆದು ಹಣವನ್ನು ನೀಡಲಾಗಿದೆ. ತಾವು ಯಾವುದೇ ಕರ್ತವ್ಯ ಲೋಪ \ ನಿರ್ಲಕ್ಷ್ಯತೆ ಮತ್ತು ಹಣ ದುರುಪಯೋಗ ಮಾಡಿಲ್ಲವೆಂದು ಹೇಳಿದ್ದಾರೆ.

6. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿಲ್ಲ.

7. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ: ಶ್ರೀನಿವಾಸಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಬಾಲಕಿಯರ ಕಾಲೇಜ್, ವಿದ್ಯಾರ್ಥಿನಿಲಯ, ಸರ್ಕಾರಿ ಪದವಿ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸರ್ಕಾರಿ ಪರಿಶಿಷ್ಟ ವರ್ಗಗಳ ಬಾಲಕಿಯರ \ ಬಾಲಕರ ವಿದ್ಯಾರ್ಥಿನಿಲಯ, ಸರ್ಕಾರಿ ಸಾರ್ವಜನಿಕ

ಬಾಲಕಿಯರ \ ಬಾಲಕರ ವಿದ್ಯಾರ್ಥಿನಿಲಯ ಹೀಗೆ ಒಟ್ಟು 14 ವಿದ್ಯಾರ್ಥಿನಿಲಯಗಳಿಗೆ ಬಯೋಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ, 1 ಕೆವಿ ಯುಪಿಎಸ್ ಉತ್ತಮ ಗುಣಮಟ್ಟದ ಉಪಕರಣಗಳನ್ನು ಕಡಿಮೆ ದರದಲ್ಲಿ ಸರಬರಾಜು ಮಾಡಲು ದರಪಟ್ಟಿಯನ್ನು ಸಲ್ಲಿಸುವಂತೆ ಎದುರುದಾರರು ದಿನಾಂಕ:20/11/15ರಂದು ದರಪಟ್ಟಿಗಳನ್ನು ಆಹ್ವಾನಿಸಿದ್ದಾರೆ. ಮೆ॥ಋಷಿ ಅಸೋಸಿಯೇಟ್ಸ್, ವಿಜಯನಗರ, ಬೆಂಗಳೂರು, ಆದಿಶಕ್ತಿ ಎಲೆಕ್ಟ್ರಿಕಲ್ಸ್, ಕನಕಪುರ ಮತ್ತು ಬಸವೇಶ್ವರ ಎಂಟರ್‌ಪ್ರೈಸಸ್, ಮಾಗಡಿ ರವರು ದರಪಟ್ಟಿಗಳನ್ನು ಸಲ್ಲಿಸಿದ್ದು, ಎದುರುದಾರರು ದಿನಾಂಕ:30/11/15ರ ತುಲನಾತ್ಮಕ ದರಪಟ್ಟಿಯನ್ನು ತಯಾರಿಸಿರುವುದು ಕಂಡು ಬಂದಿದೆ. ಮೆ॥ಋಷಿ ಅಸೋಸಿಯೇಟ್ಸ್ ಸಂಸ್ಥೆಯು ಸಲ್ಲಿಸಿದ ದರಪಟ್ಟಿಯನ್ನು ಅಂಗೀಕರಿಸಿ ದಿನಾಂಕ:30/11/15ರಂದು ಸರಬರಾಜು ಆದೇಶವನ್ನು ನೀಡಿರುವುದು ಕಂಡು ಬಂದಿದೆ. ಸರಬರಾಜುದಾರರು ಉಪಕರಣಗಳನ್ನು ಪೂರೈಸಿ, ಅಳವಡಿಸಿದ ಬಾಬ್ತು ಜಂಟಿ ನಿರ್ದೇಶಕರ ಅನುಮೋದನೆ ಪಡೆದು, ಹಣವನ್ನು ಚೆಕ್ ಮುಖಾಂತರ ನೀಡಲಾಗಿದೆಯೆಂದು ಎದುರುದಾರರು ಹೇಳಿದ್ದಾರೆ.

8. ಎದುರುದಾರರ ಆಕ್ಷೇಪಣೆಯನ್ವಯ ಶ್ರೀನಿವಾಸಪುರ ತಾಲ್ಲೂಕಿನ ಒಟ್ಟು 14 ಬಾಲಕರ \ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ, 1 ಕೆವಿ ಯುಪಿಎಸ್ ಉಪಕರಣಗಳನ್ನು ಅಳವಡಿಸ ಬೇಕಾಗಿದ್ದು, ಸದರಿ ಎಲ್ಲಾ ವಿದ್ಯಾರ್ಥಿನಿಲಯಗಳಿಗೆ ಅಳವಡಿಸ ಬೇಕಾಗಿರುವ ಉಪಕರಣಗಳ ಮೌಲ್ಯ '1 ಲಕ್ಷ ಮೀರಿದ್ದರೂ, ಎದುರುದಾರರು ಕೆಟಿಪಿಪಿ ಕಾಯಿದೆ ಅನ್ವಯ ಟೆಂಡರ್ ಆಹ್ವಾನಿಸಲು ಕ್ರಮ ವಹಿಸದೇ, ಕೇವಲ ದರಪಟ್ಟಿಗಳನ್ನು ಆಹ್ವಾನಿಸಿರುವುದು ಕಂಡು ಬಂದಿದೆ.

9. ಮೆ॥ಋಷಿ ಅಸೋಸಿಯೇಟ್ಸ್ ಸಂಸ್ಥೆಯು ಎಲ್ಲಾ 14 ವಿದ್ಯಾರ್ಥಿನಿಲಯಗಳಿಗೆ ತಲಾ '88,600/-ರಂತೆ ಒಟ್ಟು 14 ಪ್ರತ್ಯೇಕ ದರಪಟ್ಟಿಗಳನ್ನು ಸಲ್ಲಿಸಿದ್ದು, ಸದರಿ ಸಂಸ್ಥೆಯು ಸಲ್ಲಿಸಿದ ದರಪಟ್ಟಿಗಳ ಒಟ್ಟು ಮೌಲ್ಯ '12,40,400/- ಆಗಿದೆ. ಮೇಲೆ ಹೇಳಿದಂತೆ ಎದುರುದಾರರು ಸದರಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸದೇ, ಪ್ರತಿ ವಿದ್ಯಾರ್ಥಿನಿಲಯಕ್ಕೆ ಒಂದು ಲಕ್ಷದೊಳಗಿನ ಖರ್ಚಿನಂತೆ 14 ಪ್ರತ್ಯೇಕ ದರಪಟ್ಟಿಗಳನ್ನು ಪಡೆದು ಕೆಟಿಪಿಪಿ ಕಾಯಿದೆಯ ನಿಯಮಗಳಿಂದ ಪಾರಾಗಲು ಯತ್ನಿಸಿರುವುದು ಕಂಡು ಬಂದಿದೆ.

10. ಮುಂದುವರೆದು, ಸರಬರಾಜುದಾರರು ಸರಬರಾಜು ಮಾಡಿದ್ದಾರೆಂದು ಹೇಳಲಾದ ಎಲೆಕ್ಟ್ರಾನಿಕ್ ಉಪಕರಣಗಳಾದ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ, 1 ಕೆವಿ ಯುಪಿಎಸ್

ಉಪಕರಣಗಳನ್ನು ಆಯಾಯ ವಿದ್ಯಾರ್ಥಿನಿಲಯದ ದಾಸ್ತಾನಿಗೆ ಪಡೆದ ಬಗ್ಗೆ ದಾಖಲೆಗಳಿಲ್ಲ. ಸದರಿ ಸರಬರಾಜುದಾರರು ಪೂರೈಕೆ ಮಾಡಿದ ದಾಸ್ತಾನಿಗೆ ಸಂಬಂಧಪಟ್ಟ ಬಿಲ್ಲು, ಮುಂತಾದ ದಾಖಲೆಗಳಿಲ್ಲ. ಉಪಕರಣಗಳನ್ನು ಅಳವಡಿಸಿದ ದಿನಾಂಕದಿಂದ ವಾರಂಟಿ ಅವಧಿಯಲ್ಲಿ ಉಪಕರಣಗಳ ನಿರ್ವಹಣೆ \ ದುರಸ್ತಿ ಹಾಗೂ ಉಪಕರಣಗಳು ದೋಷಪೂರಿತವಾಗಿದ್ದಲ್ಲಿ, ಬದಲಿಸಲು ಅನ್ವಯವಾಗುವಂತೆ ಸರಬರಾಜುದಾರರಿಂದ ಯಾವುದೇ ಕರಾರು ಇತ್ಯಾದಿಯನ್ನು ಎದುರುದಾರರು ಮಾಡಿಕೊಂಡಿಲ್ಲ. ಸರಬರಾಜುದಾರರಿಗೆ ಚೆಕ್‌ಗಳ ಮುಖಾಂತರ ಹಣ ಪಾವತಿಸಿದ ಬಗ್ಗೆ ದಾಖಲೆಗಳಿಲ್ಲ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಎದುರುದಾರರು ಕರ್ತವ್ಯ ಲೋಪ ಹಾಗೂ ಅವ್ಯವಹಾರ ಎಸಗಿದ್ದಾರೆಂದು ದೂರುದಾರರು ಮಾಡಿರುವ ಆಪಾದನೆಯು ಮೇಲ್ನೋಟಕ್ಕೆ ಸಾಬೀತಾಗಿದೆ.

11. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

12. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, ಎದುರುದಾರರು ಸರ್ಕಾರಿ/ ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

13. ಅದಲ್ಲದೆ, ಎದುರದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ ಎದುರುದಾರರು ದಿನಾಂಕ:31/07/2018ರಂದು ನಿವೃತ್ತಿ ಹೊಂದಿರುವುದರಿಂದ, ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ಅಡಿ ಈ ಸಂಸ್ಥೆಗೆ ವಹಿಸಬೇಕೆಂದು ಕೋರಿದೆ. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ,1966 ರ ನಿಯಮ 3 (I) ರಿಂದ (III) ಅನ್ನು ಉಲ್ಲಂಘಿಸಿ ಕರ್ತವ್ಯ ನಿರ್ಲಕ್ಷ್ಯತನ

ಮತ್ತು ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯ್ದೆ, ಕಲಂ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿಯ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು ಹಾಗೂ ಮೇಲ್ಕಂಡ ಎದುರುದಾರರುಗಳ ವಿರುದ್ಧ ಇಲಾಖಾ ವಿಚಾರಣೆ ಮಾಡಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ, 1957 ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸಿಬೇಕೆಂದು ಕೋರಲಾಗಿತ್ತು.

14. ಹಾಗೆಯೇ, ಶಿಸ್ತು ನಡವಳಿಕೆಯನ್ನು ಆಪಾದಿತ ಸರ್ಕಾರಿ ನೌಕರರ ವಿರುಧ್ಧ ಇಲಾಖಾ ವಿಚಾರಣೆಯನ್ನು ನಡೆಸಲು ಶಿಸ್ತು ಪ್ರಾಧಿಕಾರಿಯಾದ ಸರ್ಕಾರ ತನ್ನ ಆದೇಶದಲ್ಲಿ ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿದ್ದು, ಗೌರವಾನ್ವಿತ ಉಪಲೋಕಾಯುಕ್ತರವರು ಅಪರ ನಿಬಂಧಕರು ವಿಚಾರಣೆಗಳು 10 ಇವರನ್ನು ವಿಚಾರಣೆ ನಡೆಸಲು ನೇಮಕ ಮಾಡಿದ್ದಾರೆ. **ಆದ್ದರಿಂದ ನಿಮ್ಮ ವಿರುಧ್ಧ ಈ ಮೇಲ್ಕಂಡ ದೋಷಾರೋಪಣೆ ಇರುತ್ತದೆ.**

4. ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ ರವರಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ ರವರು ದಿನಾಂಕ 29/08/2019 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11(9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ ರವರು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5. ಆ.ಸ.ನೌ ರವರಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಆ.ಸ.ನೌ ರವರು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 04/11/2019 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

7. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ನಾಗರಾಜು ಎಂ.ಪಿ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 3** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ ರವರ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 22/10/2021 ರಂದು ಪಡೆದುಕೊಳ್ಳಲಾಗಿರುತ್ತದೆ.

8. ಆಪಾದಿತ ಸರ್ಕಾರಿ ನೌಕರ **ಶ್ರೀಮತಿ ಶಾಂತಮ್ಮ (ಪ್ರಸ್ತುತ ನಿವೃತ್ತ),** ಸಹಾಯಕ ನಿರ್ದೇಶಕರು (ಗ್ರೇಡ್–2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನಾಗಲೀ ವಿಚಾರಣೆಯನ್ನಾಗಲೀ ಮಾಡಿಕೊಂಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಸಹ ಗುರುತಿಸಿಕೊಂಡಿರುವುದಿಲ್ಲ. ಆದ್ದರಿಂದ ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಶಾಂತಮ್ಮ ರವರ 11(18) ಕೆ.ಸಿ.ಎಸ್ (ಸಿಸಿಎ) ನಿಯಮ, 1957 ರ ಪ್ರಕಾರ ಪ್ರಶ್ನಾವಳಿಯನ್ನು ಮಾಡಿ ದಿನಾಂಕ 13/12/2021 ರಂದು ಉತ್ತರ ಪಡೆದುಕೊಂಡಿದ್ದು ಸದರಿಯವರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

9. ಉಭಯ ಪಕ್ಷಗದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ ರವರ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10. ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ ರವರ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

ಅಂಶ–2: ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13. ಈ ವಿಚಾರಣೆಯಲ್ಲಿ, ಆ.ಸ.ನೌ ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರ ಶ್ರೀ ಎಂ.ಪಿ. ನಾಗರಾಜ** ರವರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 3** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14. ದೂರುದಾರ ಪಿ.ಡಬ್ಲ್ಯೂ–1 **ಶ್ರೀ ಎಂ.ಪಿ. ನಾಗರಾಜ** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ನನಗೆ ಅ.ಸ ನೌಕರರು ಗೊತ್ತು, 2015–16 ಸಾಲಿನಲ್ಲಿ ಅ.ಸ. ನೌಕರರು ಶ್ರೀನಿವಾಸಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಗ್ರೇಡ್–2 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. 2015–16ನೇ ಸಾಲಿನಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳಿಗೆ ಬಯೋಮೆಟ್ರಿಕ್ ಉಪಕರಣಗಳು, ವೆಬ್ ಕ್ಯಾಮೆರಾ, ಕಂಪ್ಯೂಟರ್, ಯುಪಿಎಸ್ ಉಪಕರಣಗಳನ್ನು ಖರೀದಿ ಮಾಡಿ ಅಳವಡಿಸಲಿಕ್ಕೆ ಸರ್ಕಾರದಿಂದ ಆದೇಶ ಇತ್ತು. 1 ಲಕ್ಷಕ್ಕಿಂತ ಮೇಲ್ಪಟ್ಟ ಉಪಕರಣಗಳ ಖರೀದಿಯನ್ನು ಟೆಂಡರ್ ಮುಖಾಂತರ ಖರೀದಿ ಮಾಡಲು ಸರ್ಕಾರದ ನಿರ್ದೇಶನವಿತ್ತು. ಆದರೆ, ಒಂದೊಂದು ಉಪಕರಣಕ್ಕೂ ಒಂದು ಲಕ್ಷದ ಒಳಗಡೆ ಬರುವಂತೆ ಕೊಟೇಶನ್‌ಗಳನ್ನು ಪಡೆದು ಮೇಲ್ಕಂಡ ಉಪಕರಣಗಳನ್ನು ಖರೀದಿ ಮಾಡಿರುತ್ತಾರೆ. ಒಟ್ಟು 14 ವಿದ್ಯಾರ್ಥಿ ನಿಲಯಗಳಿಗೆ 15 ಲಕ್ಷಕ್ಕೂ ಮೇಲ್ಪಟ್ಟು ಉಪಕರಣಗಳನ್ನು ಟೆಂಡರ್ ಕರೆಯದೇ ಖರೀದಿ ಮಾಡಿರುವುದು ಕಂಡುಬಂದಿರುತ್ತದೆ.

15. ಪಿ.ಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಅ.ಸ.ನೌಕರರು ಒಟ್ಟು 3 ದರ ಪಟ್ಟಿಗಳನ್ನು ಪಡೆದುಕೊಂಡಿದ್ದು, ಅವುಗಳೆಂದರೆ, ಖುಶಿ ಅಸೋಸಿಯೇಟ್ಸ್ ಬೆಂಗಳೂರು, ಆದಿ ಶಕ್ತಿ ಎಲೆಕ್ಟ್ರಾನಿಕ್ಸ್, ರಾಮನಗರ ಮತ್ತು ಬಸವೇಶ್ವರ ಎಲೆಕ್ಟ್ರಾನಿಕ್ಸ್, ರಾಮನಗರ ಇವುಗಳನ್ನು ಪಡೆದುಕೊಂಡು, ಅವುಗಳಲ್ಲಿ ಕಡಿಮೆ ದರ ಪಟ್ಟಿ ನೀಡಿದ ಖುಶಿ ಅಸೋಸಿಯೇಟ್ಸ್ ಬೆಂಗಳೂರು ರವರಿಂದ 14 ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳಿಗೆ ಬಯೋಮೆಟ್ರಿಕ್ ಉಪಕರಣಗಳು, ವೆಬ್ ಕ್ಯಾಮೆರಾ, ಕಂಪ್ಯೂಟರ್, ಯುಪಿಎಸ್ ಉಪಕರಣಗಳನ್ನು ಖರೀದಿ ಮಾಡಿರುತ್ತಾರೆ. **ಖುಶಿ ಅಸೋಸಿಯೇಟ್ಸ್ ಇವರು ನೀಡಿರುವ ದರ ಪಟ್ಟಿಯಲ್ಲಿನ ವಿಳಾಸವನ್ನು ಅಂತರ್ಜಾಲದಲ್ಲಿ ಪರಿಶೀಲಿಸಲಾಗಿ, ವಿಳಾಸ ಹಾಗೂ ಟಿನ್ ನಂಬರ್‌ಗಳು ಆ.ಸ. ನೌಕರರಿಗೆ ನೀಡಿದ ದರ ಪಟ್ಟಿಯಲ್ಲಿ ಸುಳ್ಳು ನಮೂದಾಗಿರುವುದು ಕಂಡುಬಂದಿತ್ತು. ಅಂತರ್ಜಾಲದಲ್ಲಿ ಅವರ ವಿಳಾಸ ಟಿನ್ ನಂಬರ್ ಮುಖಾಂತರ ಪರಿಶೀಲಿಸಲಾಗಿ ರಾಮನಗರವೆಂದು ಕಂಡುಬಂದಿರುತ್ತದೆ.**

**16.** ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಖುಶಿ ಅಸೋಸಿಯೇಟ್ಸ್‌ನವರು ಸಪ್ಲೈ ಮಾಡಿದ ಬಿಲ್ಲುಗಳ ಮೇಲೆ ಯಾರು ಸರಬರಾಜು ಮಾಡಿರುತ್ತಾರೆಂದು ಸಹಿ ಇರಲಿಲ್ಲ. ಆ.ಸ. ನೌಕರರು ಸದರಿಯವುಗಳನ್ನು ಪಡೆದ ಬಗ್ಗೆ ಸಹಿ ಮತ್ತು ದಾಸ್ತಾನು ಪುಸ್ತಕಗಳಲ್ಲಿ ದಾಖಲೆ ಕಂಡುಬರಲಿಲ್ಲ. ಖುಶಿ ಅಸೋಸಿಯೇಟ್ಸ್‌ರವರು ಮೇಲ್ಕಂಡ ಉಪಕರಣಗಳ ಉತ್ಪಾದಕರಾಗಲೀ, ಮಾರಾಟಗಾರರಾಗಲೀ ಇರಲಿಲ್ಲ ಮತ್ತು ಉಪಕರಣಗಳು ನಿಗದಿತ ಅವಧಿಯಲ್ಲಿ ಲೋಪದೋಶಗಳು ಕಂಡುಬಂದಲ್ಲಿ, ರಿಪೇರಿಗಾಗಿ/ಬದಲಾಯಿಸಲು ಯಾವುದೇ ಕರಾರು ಪತ್ರ ಮಾಡಿಕೊಂಡಿರುವುದು ಕಂಡುಬಂದಿರುವುದಿಲ್ಲ. ಆ ಬಗ್ಗೆ ನಮ್ಮ ಕಾರ್ಯಕರ್ತರು ದಾಖಲೆಗಳನ್ನು ಪರಿಶೀಲಿಸಿ, ನಮಗೆ ಮಾಹಿತಿ ನೀಡಿದ್ದರ ಆಧಾರದ ಮೇಲೆ ನಾನು ಈ ಫಿರ್ಯಾದಿ ನೀಡಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

17. ಪಿಡಬ್ಲ್ಯೂ–1 ರವರ ಮುಖ್ಯ ವಿಚಾರಣೆಯಲ್ಲಿ, ಆ.ಸ. ನೌಕರರು ಮೇಲ್ಕಂಡ ಉಪಕರಣಗಳನ್ನು ಒಟ್ಟಾಗಿ ಒಂದು ಲಕ್ಷದ ಮೇಲ್ಪಟ್ಟಿದರೂ ಸಹ ಅವುಗಳ ಮೌಲ್ಯವನ್ನು ಒಂದೊಂದೇ ಉಪಕರಣಕ್ಕೆ ಒಂದು ಲಕ್ಷದ ಒಳಗೆ ನಮೂದಿಸಿ, ಪಾರದರ್ಶಕ ಕಾಯ್ದೆಯನ್ನು ಉಲ್ಲಂಘಿಸಿ, ಟೆಂಡರ್ ಕರೆಯದೇ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆ. ಈಗ ತಾನು ಸಲ್ಲಿಸಿರುವ ಫಿರ್ಯಾದು **ನಿ.ಪಿ–1(3 ಪುಟಗಳು)**

ಎಂದು, ನಿಪಿ.-1 ಜೊತೆಗೆ ಪ್ರಪತ್ರ 1 ಮತ್ತು 2ನ್ನು ಸಲ್ಲಿಸಿದ್ದು, ಅವುಗಳನ್ನು ಕ್ರಮವಾಗಿ **ನಿ.ಪಿ-2** ಮತ್ತು **ನಿ.ಪಿ-3** ಎಂದು ಗುರುತಿಸಲಾಯಿತು.

18. ಆಪಾದಿತ ಸರ್ಕಾರಿ ನೌಕರ **ಶ್ರೀಮತಿ ಶಾಂತಮ್ಮ (ಪ್ರಸ್ತುತ ನಿವೃತ್ತ)**, ಸಹಾಯಕ ನಿರ್ದೇಶಕರು (ಗ್ರೇಡ್-2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನಾಗಲೀ ವಿಚಾರಣೆಯನ್ನಾಗಲೀ ಮಾಡಿಕೊಂಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಸಹ ಗುರುತಿಸಿಕೊಂಡಿರುವುದಿಲ್ಲ. ಆದ್ದರಿಂದ ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಶಾಂತಮ್ಮ ರವರ 11(18) ಕೆ.ಸಿ.ಎಸ್ (ಸಿಸಿಎ) ನಿಯಮ, 1957 ರ ಪ್ರಕಾರ ಪ್ರಶ್ನಾವಳಿಯನ್ನು ಮಾಡಿ ದಿನಾಂಕ 13/12/2021 ರಂದು ಉತ್ತರ ಪಡೆದುಕೊಂಡಿದ್ದು ಸದರಿಯವರು ದೂರುದಾರರ ಹೇಳಿಕೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

19. ಆಪಾದಿತ ಸರ್ಕಾರಿ ನೌಕರ ಶ್ರೀಮತಿ ಶಾಂತಮ್ಮ, ಸಹಯಕ ನಿರ್ದೇಶಕರು ಗ್ರೇಡ್-2, ಸಮಾಜ ಕಲ್ಯಾಣ ಇಲಾಖೆ ರವರು ದಿನಾಂಕ 23.12.2021 ರ ತಮ್ಮ ಲಿಖಿತ ವಾದದಲ್ಲಿ ಒಂದು ವಿದ್ಯಾರ್ಥಿನಿಲಯಕ್ಕೆ ಸಂಬಂಧಪಟ್ಟಂತೆ ಸರಬರಾಜು ಆದೇಶವನ್ನು 2 ಆದೇಶಗಳನ್ನಾಗಿ ವಿಭಜನೆ ಮಾಡಿರುವುದಿಲ್ಲ, ಸರ್ಕಾರವು ರಾಜ್ಯ ವ್ಯಾಪ್ತಿ ವಿದ್ಯಾರ್ಥಿನಿಲಯಗಳಿಗೆ ಬಯೋಮೆಟ್ರಿಕ್ ಉಪಕರಣಗಳು, ವೆಬ್‌ಕ್ಯಾಮರಾ, ಕಂಪ್ಯೂಟರ್ ಯುಪಿಎಸ್ ಉಪಕರಣಗಳನ್ನು ಖರೀದಿಗೆ ವಿದ್ಯಾರ್ಥಿನಿಲಯಗಳ ಸಂಖ್ಯೆಗೆ ಅನುಗುಣವಾಗಿ ಅನುದಾನವನ್ನು ಹಂಚಿರುತ್ತಾರೆ, ನಿಯಮಾನುಸಾರವಾಗಿ ಕ್ರಮಕೈಗೊಂಡಿರುತ್ತೇನೆಂದು ತಾನು ಕರ್ತವ್ಯಲೋಪವೆಸಗಿರುವುದಿಲ್ಲವೆಂದು ತಮ್ಮ ಲಿಖಿತ ವಾದದಲ್ಲಿ ತಿಳಿಸಿರುತ್ತಾರೆ.

20. ಪಿ.ಡಬ್ಲ್ಯೂ-1 ರವರ ಸಾಕ್ಷ್ಯ ನಿ.ಪಿ-1 ರಿಂದ ನಿ.ಪಿ-3 ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, 2015-16 ಸಾಲಿನಲ್ಲಿ ಅ.ಸ. ನೌಕರರು ಶ್ರೀನಿವಾಸಪುರ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಹಾಯಕ ನಿರ್ದೇಶಕರು ಗ್ರೇಡ್-2 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳಿಗೆ ಬಯೋಮೆಟ್ರಿಕ್

ಉಪಕರಣಗಳು, ವೆಬ್ ಕ್ಯಾಮೆರಾ, ಕಂಪ್ಯೂಟರ್, ಯುಪಿಎಸ್ ಉಪಕರಣಗಳನ್ನು ಖರೀದಿ ಮಾಡಿ ಅಳವಡಿಸಲಿಕ್ಕೆ ಸರ್ಕಾರದಿಂದ ಆದೇಶಿಸಿದ್ದು, 1 ಲಕ್ಷಕ್ಕಿಂತ ಮೇಲ್ಪಟ್ಟ ಉಪಕರಣಗಳ ಖರೀದಿಯನ್ನು ಟೆಂಡರ್ ಮುಖಾಂತರ ಖರೀದಿ ಮಾಡಲು ಸರ್ಕಾರದ ನಿರ್ದೇಶನವಿದ್ದು, ಆದರೆ, ಆಪಾದಿತ ಸರ್ಕಾರಿ ನೌಕರರು ಒಂದೊಂದು ಉಪಕರಣಕ್ಕೂ ಒಂದು ಲಕ್ಷದ ಒಳಗಡೆ ಬರುವಂತೆ ಕೊಟೇಶನ್‌ಗಳನ್ನು ಪಡೆದು ಮೇಲ್ಕಂಡ ಉಪಕರಣಗಳನ್ನು ಖರೀದಿ ಮಾಡಿದ್ದು, ಒಟ್ಟು 14 ವಿದ್ಯಾರ್ಥಿ ನಿಲಯಗಳಿಗೆ 15 ಲಕ್ಷಕ್ಕೂ ಮೇಲ್ಪಟ್ಟು ಉಪಕರಣಗಳನ್ನು ಟೆಂಡರ್ ಕರೆಯದೇ ಖರೀದಿ ಮಾಡಿರುವುದಾಗಿ ಪಿಡಬ್ಲ್ಯೂ-1 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ. ಅ.ಸ.ನೌಕರರು ಒಟ್ಟು 3 ದರ ಪಟ್ಟಿಗಳನ್ನು ಪಡೆದುಕೊಂಡಿದ್ದು, ಅವುಗಳೆಂದರೆ, ಖುಶಿ ಅಸೋಸಿಯೇಟ್ಸ್ ಬೆಂಗಳೂರು, ಆದಿ ಶಕ್ತಿ ಎಲೆಕ್ಟ್ರಾನಿಕ್ಸ್, ರಾಮನಗರ ಮತ್ತು ಬಸವೇಶ್ವರ ಎಲೆಕ್ಟ್ರಾನಿಕ್ಸ್, ರಾಮನಗರ ಇವುಗಳನ್ನು ಪಡೆದುಕೊಂಡು, ಅವುಗಳಲ್ಲಿ ಕಡಿಮೆ ದರ ಪಟ್ಟಿ ನೀಡಿದ ಖುಶಿ ಅಸೋಸಿಯೇಟ್ಸ್ ಬೆಂಗಳೂರು ರವರಿಂದ 14 ವಿದ್ಯಾರ್ಥಿ/ವಿದ್ಯಾರ್ಥಿನಿಯರ ನಿಲಯಗಳಿಗೆ ಬಯೋಮೆಟ್ರಿಕ್ ಉಪಕರಣಗಳು, ವೆಬ್ ಕ್ಯಾಮೆರಾ, ಕಂಪ್ಯೂಟರ್, ಯುಪಿಎಸ್ ಉಪಕರಣಗಳನ್ನು ಖರೀದಿ ಮಾಡಿದ್ದು, ಖುಶಿ ಅಸೋಸಿಯೇಟ್ಸ್ ಇವರು ನೀಡಿರುವ ದರ ಪಟ್ಟಿಯಲ್ಲಿನ ವಿಳಾಸವನ್ನು ಅಂತರ್ಜಾಲದಲ್ಲಿ ಪರಿಶೀಲಿಸಲಾಗಿ, ವಿಳಾಸ ಹಾಗೂ ಟಿನ್ ನಂಬರ್‌ಗಳು ಆ.ಸ. ನೌಕರರಿಗೆ ನೀಡಿದ ದರ ಪಟ್ಟಿಯಲ್ಲಿ ಸುಳ್ಳು ನಮೂದಾಗಿರುವುದು ಕಂಡುಬಂದಿತ್ತು. ಅಂತರ್ಜಾಲದಲ್ಲಿ ಅವರ ವಿಳಾಸ ಟಿನ್ ನಂಬರ್ ಮುಖಾಂತರ ಪರಿಶೀಲಿಸಲಾಗಿ ರಾಮನಗರವೆಂದು ಕಂಡುಬಂದಿರುತ್ತದೆಂದು ದೂರುದಾರರು ಸಾಕ್ಷ್ಯ ನುಡಿದಿದ್ದು, ಆಪಾದಿತ ಸರ್ಕಾರಿ ನೌಕರರು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿರುವುದು ಕಂಡುಬರುತ್ತದೆ ಹಾಗೂ ಮೇ: ಖುಶಿ ಅಸೋಸಿಯೇಟ್ಸ್‌ನವರು ಎಲ್ಲಾ 14 ವಿದ್ಯಾರ್ಥಿನಿಲಯಗಳಿಗೆ ತಲಾ ರೂ. 88,600/- ರಂತೆ ಒಟ್ಟು 14 ಪ್ರತ್ಯೇಕ ದರಪಟ್ಟಿಗಳನ್ನು ಸಲ್ಲಿಸಿದ್ದು, ಸದರಿ ಸಂಸ್ಥೆಯು ಸಲ್ಲಿಸಿದ ದರಪಟ್ಟಿಗಳ ಒಟ್ಟು ಮೌಲ್ಯ ರೂ 12,40,400/- ಆಗಿದೆ. ಸಪ್ಲೈ ಮಾಡಿದ ಬಿಲ್ಲುಗಳ ಮೇಲೆ ಯಾರು ಸರಬರಾಜು ಮಾಡಿರುತ್ತಾರೆಂದು ಸಹಿ ಕಂಡುಬಂದಿಲ್ಲ, ದಾಸ್ತಾನು ಪುಸ್ತಕಗಳಲ್ಲಿ ದಾಖಲೆ ಕಂಡುಬಂದಿರುವುದಿಲ್ಲ ಹಾಗೂ ಸದರಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಖರೀದಿಸಲು ನಿಯಮಾನುಸಾರ ಟೆಂಡರ್ ಆಹ್ವಾನಿಸದೆ, ಪ್ರತಿ ವಿದ್ಯಾರ್ಥಿನಿಲಯಕ್ಕೆ ಒಂದು ಲಕ್ಷದೊಳಗಿನ ಖರ್ಚಿನಂತೆ ಉದ್ದೇಶಪೂರಕವಾಗಿ ಪ್ರತ್ಯೇಕ ದರಪಟ್ಟಿಗಳನ್ನು ಪಡೆದು ಕೆ.ಟಿ.ಪಿ.ಪಿ ಕಾಯಿದೆಯ ನಿಯಮವನ್ನು ಉಲ್ಲಂಘನೆ ಮಾಡಿರುವುದು ಕಡುಬರುತ್ತದೆ. ದೋಷಾರೋಪಣೆಯಲ್ಲಿನ ಆಪಾದನೆಗಳನ್ನು ಅಲ್ಲಗಳೆಯಲು ಆಪಾದಿತ ಸರ್ಕಾರಿ ನೌಕರರು ತಮ್ಮನಾಗಲೀ ಅಥವಾ ಬೇರೆ ಯಾರನ್ನಾಗಲೀ

ವಿಚಾರಣೆಯನ್ನು ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲಾತಿಗಳನ್ನು ಗುರುತಿಸಿಕೊಂಡಿರುವುದಿಲ್ಲ.

**ಸಾರ್ವಜನಿಕ ಸಂಗ್ರಹಣೆ ಕಾಯಿದೆಯಲ್ಲಿ ಕರ್ನಾಟಕ ಪಾರದರ್ಶಕತೆ, 1999 ರ ಸೆಕ್ಷನ್ 4,** ಕಾಯಿದೆಯು ಅಧ್ಯಾಯ 2ರ ನಿಬಂಧನೆಗಳ ಅನ್ವಯಕ್ಕೆ ವಿನಾಯಿತಿಗಳನ್ನು ವಿವರಿಸುತ್ತದೆ. 2001 ರ ಸಾರ್ವಜನಿಕ ಸಂಗ್ರಹಣೆಯಲ್ಲಿನ ಕರ್ನಾಟಕ ಪಾರದರ್ಶಕತೆ (ತಿದ್ದುಪಡಿ) ಕಾಯಿದೆಯ ಅಡಿಯಲ್ಲಿ ಸೆಕ್ಷನ್ 4 ರ ಷರತ್ತು (ಇ) ಅನ್ನು ಬದಲಿಸಲಾಗಿದೆ. ಅದರಂತೆ ಈ ಕೆಳಗೆ ಉದ್ಧರಿಸಲಾದ (ಇ) ಷರತ್ತು ಪಾರದರ್ಶಕತೆ ಅಧಿನಿಯಮದ ವಿನಾಯಿತಿ ಅಂಶಗಳಲ್ಲಿ ಬರುತ್ತದೆ.

(e) Where the procurement is by the Government Departments, State Government Undertakings, or any Board, Body or Corporation established by or under any law and owned or controlled by the Government or Zilla Panchayats constgituted under the Karnataka Panchayat Raj Act, 1993 or City Municipal Councils established under the Karnataka Municipalities Act 1964 or the Hyderabad Karnataka Areas Development Board constituted under the Hyderabad Karnataka Area Development Board Act, 1993 or Malnad Area Development Board constituted under the Madnad Area Development Board Act. 1991 or the Bayaluseeme Development Board constituted under the Bayaluseeme Development Board Act, 1994.

(i) In case of construction works of all types the value of which does not exceed rupees five lakhs.

(ii) **In case of goods or services other than construction works the value of which does not exceed rupees one lakh.**

ಮೇಲ್ಕಂಡ 2 ಸಂದರ್ಭಗಳಲ್ಲಿ ಮಾತ್ರ ವಿನಾಯಿತಿಯು ಅನ್ವಯಿಸುತ್ತದೆ. ಆದರೆ, ಆಪಾದಿತ ಸರ್ಕಾರಿ ನೌಕರರು 2015-16ನೇ ಸಾಲಿನಲ್ಲಿ ಶ್ರೀನಿವಾಸಪುರ ತಾಲ್ಲೂಕಿನ 14-15 ವಿದ್ಯಾರ್ಥಿ/ ವಿದ್ಯಾರ್ಥಿನಿ ನಿಲಯಗಳಿಗೆ ಅಂತರ್ಜಾಲ ಬಯೋ ಮೆಟ್ರಿಕ್ ಉಪಕರಣ, ವೆಬ್ ಕ್ಯಾಮೆರಾ, ಗಣಕಯಂತ್ರ ಮತ್ತು ಯುಪಿಎಸ್ ಗಳನ್ನು ಅಳವಡಿಸುವ ಸಂಬಂಧ ಮೊತ್ತವು ರೂ. 1.00 ಲಕ್ಷಕ್ಕಿಂತ ಅಧಿಕವಾಗಿರುವುದರಿಂದ

ಪಾರದರ್ಶಕತೆ ಅಧಿನಿಯಮಗಳ ಪ್ರಕಾರ ಟೆಂಡರ್ ಕರೆಯದೆ ಸುಮಾರು 15 ಲಕ್ಷಕ್ಕೂ ಮೇಲ್ಪಟ್ಟ ಎಲೆಕ್ಟ್ರಾನಿಕ್ ಉಪಕರಣಗಳನ್ನು ಸುಳ್ಳು ಮತ್ತು ಬೋಗಸ್ ದರಪಟ್ಟಿಗಳನ್ನು 1 ಲಕ್ಷಕ್ಕೆ ಮಿತಿಗೊಳಿಸಿ ಪಡೆದುಕೊಂಡು ಖರೀದಿಸಿ, ಸರ್ಕಾರಿ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ವಿಚಾರಣೆಯಲ್ಲಿ ಶಿಸ್ತುಪ್ರಾಧಿಕಾರಿಗಳು ಸಾಬೀತುಪಡಿಸುವಲ್ಲಿ **ಸಫಲರಾಗಿರುತ್ತಾರೆ.**

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ **ಶ್ರೀಮತಿ ಶಾಂತಮ್ಮ (ಪ್ರಸ್ತುತ ನಿವೃತ್ತ)**, ಸಹಾಯಕ ನಿರ್ದೇಶಕರು (ಗ್ರೇಡ್–2), ಸಮಾಜ ಕಲ್ಯಾಣ ಇಲಾಖೆ, ಶ್ರೀನಿವಾಸಪುರ ತಾಲ್ಲೂಕು, ಕೋಲಾರ ಜಿಲ್ಲೆ ರವರ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–2 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**25ನೇ ಜನವರಿ 2022.**

(ಜಿ. ನಂಜುಂಡಯ್ಯ)
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| **LIST OF WITNESS EXAMINED ON BEHALF OF DISCIPLINARY AUTHORITY :** |
|---|
| PW-1 : Sri. Nagaraju M.P. (Complainant) (original) |

| **LIST OF EXHIBITS MARKED ON BEHALF OF DISCIPLINARY AUTHORITY:** | |
|---|---|
| Ex. P-1: | Complaint of the complainant (original) |
| Ex. P.2 : | Form No. I (complaint) dated 29/12/2017. (original) |
| Ex. P.3 : | Form No. II (Affidavit) dated 29/12/2017 (original) |

**DGO is already retired from service.**

**25st January 2022.**

**(G. NANJUNDAIAH)**
Additional Registrar (Enquiries)-10
Karnataka Lokayukta,
Bengaluru.

KARNATAKA LOKAYUKTA

No.UPLOK-2/DE.23/2019/ARE-10

Multi Storied Building,
Dr. B.R. Ambedkar Veedhi,
Bengaluru-560 001.
Dated 09.02.2022.

RECOMMENDATION

Sub:- Departmental inquiry against Smt.Shanthamma, the then Assistant Director (Retired), Social Welfare Department, Srinivasapura Taluk, Kolar District - reg.

Ref:- 1) Government Order No.SWD 512 PKS 2018 dt.04.01.2019.

2) Nomination order No. UPLOK-2/DE.23/2019 dated 23.01.2019 of Upalokayukta, State of Karnataka.

3) Inquiry report dated 25.01.2022 of Additional Registrar of Enquiries-10, Karnataka Lokayukta, Bengaluru.

~~~~~

The Government by its order dated 04.01.2019 initiated the disciplinary proceedings against Smt.Shanthamma, Assistant Director (Retired), Social Welfare Department, Srinivasapura Taluk, Kolar District, [hereinafter referred to as Delinquent Government Official, for short as 'DGO' ] and entrusted the departmental inquiry to this Institution.
~~~~~

2. This Institution by Nomination UPLOK-2/DE.23/2019 dated 23.01.2019 nominated Additional Registrar of Enquiries-10, Karnataka Lokayukta, Bengaluru, as the Inquiry Officer to frame charges and to conduct departmental inquiry against DGO for the alleged charge of misconduct, said to have been committed by her.

3. The DGO was tried for the charge of purchasing electronic items above 15 lakhs by obtaining fake price list and thereby failed to call tender as required under KTPP Act and thereby misappropriated Govt. funds.

4. The Inquiry Officer (Additional Registrar of Enquiries-10) on proper appreciation of oral and documentary evidence has held that, the above charge against the DGO Smt.Shanthamma, the then Assistant Director (Retired), Social Welfare Department, Srinivasapura Taluk, Kolar District, is ' proved'.

5. On re-consideration of report of inquiry and all other materials on record, I do not find any reason to interfere with the findings recorded by the Inquiry Officer. Therefore, it is

hereby recommended to the Government to accept the report of Enquiry Officer.

6. As per the First Oral Statements of DGO furnished by the Enquiry Officer, DGO Smt.Shanthamma, has retired from service on 31.07.2018.

7. Having regard to the nature of charge *'proved'* against the DGO and considering the totality of circumstances, it is hereby recommended to the Government to impose penalty of ' withholding 20% (twenty) of pension payable to DGO Smt.Shanthamma, for a period of five years'.

8. Action taken in the matter shall be intimated to this Authority.

Connected records are enclosed herewith.

9/2/22

**(JUSTICE B.S.PATIL)**
Upalokayukta,
State of Karnataka.